b) If not, what are the reasons therefore?

c) Is it not an injustice on minority students?

Sri H.G. Govindha Gowda (Minister for Primary and Secondary Education):

a) Hindi language has been allowed to be offered in Part-II. There is no provision to allow Marathi and Urdu to be offered in Part-II PUC course.

b) Since, the languages (Marathi and Urdu) can be offered in Part-I, provision is not made in Part-II.

c) -No-

ಮಡಿಕೇರಿ ತಾಲ್ಲೂಕಿನಲ್ಲಿ ಟೀ ಯೋಜನೆಗೆ ಕಾರ್ಯಕ್ರಮ

398 - ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯವರು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಗಾಳಿಬೀಡುವಿನಲ್ಲಿ ಟೀ ಯೋಜನೆಯಲ್ಲಿ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಆ) ಈ ಯೋಜನೆಯಲ್ಲಿನ ಸದ್ಯದ ಪ್ರಗತಿ ಯಾವ ಹಂತದಲ್ಲಿದೆ.?

ಇ) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಗಾಳಿಬೀಡುವಿನಲ್ಲಿ ಈಗ ಟೀ ಯೋಜನೆಯಡಿಯಲ್ಲಿ ಯಾವುದೇ ರೀತಿಯ ಟೀ ಬೆಳೆಯುವ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ. ಇದನ್ನು 1988ರ ಮಳೆಗಾಲಕ್ಕೆ ನಿಲ್ಲಿಸಲಾಗಿರುತ್ತದೆ.

ಆ) 1985ರಿಂದ 1988ರವರೆಗೆ ಬೆಳೆಸಿದಂತೆ 42 ಹೆಕ್ಟೇರು ಟೀ ಪ್ರದೇಶದೊಂದಿಗೆ ಇಲಾಖೆಯು ಬೆಳೆಸಿದ 13.9 ಹೆಕ್ಟೇರು ಟೀ ನೆಡುತೋಪುಗಳನ್ನು ನಿರ್ವಹಿಸುತ್ತಲಿದ್ದು, ಈ ಕ್ಷೇತ್ರಗಳನ್ನು ಸಹ ಲೈಸೆನ್ಸ್ ಫೀ ಆಧಾರದ ಮೇಲೆ 1992-93 ರಿಂದ 15 ವರ್ಷಗಳಿಗೆ 20.60 ಲಕ್ಷ ರೂ.ಗಳಿಗೆ ಖಾಸಗಿ ಸಂಸ್ಥೆಗೆ ಲೈಸನ್ಸ್‌ನ್ನು ನೀಡಲಾಗಿದೆ.

ಇ) ಈ ಯೋಜನೆಯ ಅಂದಾಜು ವೆಚ್ಚ ಅಂದರೆ 1984-85ರಿಂದ 1992-93ರವರೆಗೆ ಟೀ ನೆಡುತೋಪುಗಳನ್ನು ಬೆಳೆಸಲು ಮತ್ತು ಇತರ ಅತ್ಯವಶ್ಯಕವಾದ ಕೆಲಸಕಾರ್ಯಗಳನ್ನು ಮಾಡಲು ರೂ.130.20 ಲಕ್ಷಗಳಾಗಿದ್ದು ಈಗ ಈ ಯೋಜನೆಯಡಿಯಲ್ಲಿ ಯಾವುದೇ ರೀತಿಯ ಖರ್ಚು ವೆಚ್ಚಗಳನ್ನು ನಿಗಮವು ಮಾಡುತ್ತಿಲ್ಲ.